ಭಾಷೆಯನ್ನು ಚೆನ್ನಾಗಿ ಮಾತಾಡುತ್ತಿದ್ದ ಅವರು ಪಕ್ಷಗಳಾಚೆ ನಿಂತು ಯೋಚಿಸಬಲ್ಲ ಶಕ್ತಿಯನ್ನು ಹೊಂದಿದ್ದರು. ಕೆಲಸ ಸಣ್ಣದಿರಲಿ, ದೊಡ್ಡದಿರಲಿ, ಅವರು ಅದನ್ನು ಮಾಡಿಕೊಡುತ್ತಿದ್ದರು. ದೆಹಲಿ ಕರ್ನಾಟಕ ಸಂಘಕ್ಕೆ ಒಮ್ಮೆ ನವದೆಹಲಿಯ ಮಹಾನಗರ ಪಾಲಿಕೆಯು ಕೋಟ್ಯಂತರ ರೂಗಳ ದಂಡ ವಿಧಿಸಿದಾಗ, ಅನಂತ ಕುಮಾರ್ ಅವರು ನಮ್ಮೆಲ್ಲರ ಪರವಾಗಿ ಹೋರಾಡಿ, ಕಾನೂನಿನಲ್ಲಿ ಸೂಕ್ತ ಬದಲಾವಣೆ ತಂದು ಸಂಘವನ್ನು ರಕ್ಷಿಸಿದ್ದರು. ಉಳಿದಂತೆ, ಆಸ್ಕರ್ ಫೆರ್ನಾಂಡಿಸ್, ಸದಾನಂದ ಗೌಡ ಹಾಗೂ ವೀರಪ್ಪ ಮೊಯಿಲಿ ಅವರೂ ನಮ್ಮ ಬೇಡಿಕೆಗಳಿಗೆ ಕಿವಿಕೊಡುತ್ತಾರೆ.

ಇಷ್ಟಿದ್ದರೂ ತುಳುವನ್ನು ಎಂಟನೇ ಪರಿಚ್ಛೇದಕ್ಕೆ ಸೇರಿಸುವಲ್ಲಿ ಇವರೆಲ್ಲರೂ ವಿಫಲರಾದರು ಎಂಬುದನ್ನು ಮರೆಯುವಂತಿಲ್ಲ.

◆ ನೀವು ದಕ್ಷಿಣ ಕನ್ನಡದಲ್ಲಿ ಹುಟ್ಟಿ ಅಲ್ಲಿನ ಸಂಸ್ಕೃತಿಯನ್ನು ಮೈಗೂಡಿಸಿಕೊಂಡವರು. ಅಲ್ಲಿಂದ ನಿಮ್ಮ ಕಾರ್ಯಸ್ಥಾನ ಹಂಪಿ ಆಯಿತು. ಅಲ್ಲೂ ಕೆಲಕಾಲ ಕೆಲಸ ಮಾಡಿ ನವದೆಹಲಿಗೆ ಹೋದಿರಿ. ಆ ನಂತರ ವಿದೇಶಗಳಲ್ಲೂ ಕೆಲಸ ಮಾಡಿದ್ದೀರಿ. ಹಿಂತಿರುಗಿ ನೋಡಿದಾಗ ನಿಮ್ಮ ದ.ಕ., ಹಂಪಿ, ಕರ್ನಾಟಕ, ಕನ್ನಡ ಹೇಗೆ ಕಾಣುತ್ತದೆ? ಅದು ನಿಮ್ಮ ಜೀವನ ದೃಷ್ಟಿಯಲ್ಲಿ ತಂದ ಪಲ್ಲಟ ಏನು?

ಬೇರೆ ಬೇರೆ ಊರುಗಳಲ್ಲಿ ಕೆಲಸ ಮಾಡಿದ್ದರ ಒಂದು ಲಾಭವೆಂದರೆ, ಎಲ್ಲ ಕಡೆಯೂ ಗೆಳೆಯರು ಇರುವುದು. ಆದರೆ ಈಗ ಊರುಗಳು ತೀವ್ರವಾಗಿ ಬದಲಾಗಿವೆ ಅನ್ನಿಸುತ್ತದೆ.

20ನೇ ಶತಮಾನದ ಆರಂಭಕ್ಕೆ ದ.ಕ. ಜಿಲ್ಲೆಯು 'ಆಧುನಿಕ ವಿದ್ಯೆ'ಗೆ ತನ್ನನ್ನು ತೆರೆದುಕೊಂಡಿತ್ತು. ಅಲ್ಲಿನ ಹುಡುಗರು ಕಷ್ಟಪಟ್ಟು ನಾಲ್ಕಕ್ಷರ ಕಲಿತರು. ಮುಂಬೈ ತಲುಪಿದರು, ದುಬೈಗೆ ಹಾರಿದರು. ಹೋದಲ್ಲೆಲ್ಲ ತಮಗಾದ ಅವಮಾನಗಳನ್ನು ಸಹಿಸಿಕೊಂಡು, ತುಂಬಾ ಕಷ್ಟಪಟ್ಟು ದುಡಿದರು, ಹಂತಹಂತವಾಗಿ ಮೇಲೇರಿದರು. ಆದರೆ 80ರ ದಶಕದ ಆನಂತರದಲ್ಲಿ ಕಾರಣಾಂತರದಿಂದ ಹೊರನಾಡಿನ ವಲಸೆ ಕಡಿಮೆ ಅಥವಾ ಇಲ್ಲವಾಯಿತು. ಹೊಸ ಉದ್ಯೋಗಗಳನ್ನು ಸೃಷ್ಟಿಸುವಲ್ಲಿ ಸರಕಾರ ವಿಫಲವಾಯಿತು. ಇದೇ ಕಾಲಘಟ್ಟದಲ್ಲಿ ಕಾಣಿಸಿಕೊಂಡ ವ್ಯಾಪಾರೀ ಮನೋಭಾವದ ಶಿಕ್ಷಣಸಂಸ್ಥೆಗಳು ಅನೇಕರಿಗೆ ಶಿಕ್ಷಣ ನೀಡಿದರೂ, ನಿರುದ್ಯೋಗವೂ ಹೆಚ್ಚಿತು. ಹೀಗೆ ಒಂದೆಡೆ ಉದ್ಯೋಗವಿಲ್ಲದೆ ಒದ್ದಾಡುತ್ತಿದ್ದ, ಇನ್ನೊಂದೆಡೆ ಉನ್ನತ ಶಿಕ್ಷಣಕ್ಕೆ ಅವಕಾಶ ದೊರಕದೆ ಕೊರಗುತ್ತಿದ್ದ ಹೊಸ ತಲೆಮಾರನ್ನು ಕೋಮುವಾದಿಗಳು ತಡಮಾಡದೆ ಅಪ್ಪಿಕೊಂಡರು. ಕಾರಣ ಅಮಾಯಕ ಹುಡುಗರು ಜಾತಿವಾದಿಗಳೂ, ಕೋಮುವಾದಿಗಳೂ ಆಗುತ್ತಾ, ಮೇಲ್ವರ್ಗ ಮತ್ತು ಮೇಲ್ಜಾತಿ ಜನರ ಕೈಯ ಸಾಧನಗಳಾಗಿ ಬೆಳೆಯಲಾರಂಭಿಸಿದರು. ಹಾಗೆ ಆಗುತ್ತಿದ್ದಾಗ ನಾನು ಊರು ಬಿಟ್ಟಿದ್ದೆ.

ಜಿಲ್ಲೆ ಬಿಟ್ಟರೂ, ನಮಗೆ ಸಿಕ್ಕಿದ ವೇದಿಕೆಗಳಲ್ಲಿ ತುಳುನಾಡಿನ ಬಗ್ಗೆ ಯಾವಾಗಲೂ ನಾವು ಬಹಳ ಅಭಿಮಾನದಿಂದ ಮಾತನಾಡುತ್ತೇವೆ. ಕಾರ್ನಾಡ್ ಸದಾಶಿವ ರಾವ್, ಕುದ್ಮುಲ್ ರಂಗರಾವ್, ಕಮಲಾದೇವಿ ಚಟ್ಟೋಪಾಧ್ಯಾಯ, ಉಳ್ಳಾಲ ಶ್ರೀನಿವಾಸ ಮಲ್ಯ, ಶಿವರಾಮ ಕಾರಂತ, ಯಕ್ಷಗಾನ, ಭೂತಾರಾಧನೆ ಮತ್ತಿತರ ವ್ಯಕ್ತಿ ಮತ್ತು ವಿಷಯಗಳ ಬಗ್ಗೆ ಮಾತನಾಡುವುದೆಂದರೆ ನಮಗೆಲ್ಲ ಇನ್ನಿಲ್ಲದ ಸಂತೋಷ. ಒಂದು ಸಣ್ಣ ಊರಿನ ಅಸಾಮಾನ್ಯ ಸಾಧನೆಗಳ ಬಗ್ಗೆ ಮಾತಾಡುವಾಗ ಜನರೂ ಕುತೂಹಲದಿಂದ ಕೇಳುತ್ತಾರೆ. ಆದರೆ ಈಗ ನಮ್ಮ ಬಾಯಿ ಕಟ್ಟಿದೆ. ದ.ಕ. ಜಿಲ್ಲೆಯ ಬಗ್ಗೆ ಈಗ ಹೆಚ್ಚು ಮಾತಾಡಲಾಗುತ್ತಿಲ್ಲ. ನಿವೃತ್ತನಾದ ಮೇಲೆ ಮತ್ತೆ ಊರಿಗೆ ಹೋಗಬೇಕೆಂದಿದ್ದ ಕನಸನ್ನು ಈಗ ಕೈಬಿಟ್ಟಿದ್ದೇನೆ.

ಉಳಿದಂತೆ ಕನ್ನಡ ವಿವಿ, ಕನ್ನಡ, ಕರ್ನಾಟಕ ಇತ್ಯಾದಿಗಳೆಲ್ಲ ನನ್ನ ಸ್ಫೂರ್ತಿಯ ಕೇಂದ್ರಗಳು.